(ಇಂದು ದಿನಾಂಕಃ 21–08–2025 ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

ಪಾಟೀಸವಾಲು ಃ ಶ್ರೀ ಎಂ ಬಿ ವಿ ವಕೀಲರಿಂದ ಃ -

1) ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಬರೆಯಲು ಮಾಹಿತಿಯನ್ನು ನಾನೇ ನೀಡಿರುತ್ತೇನೆ. ಅದರಲ್ಲಿ ಇದ್ದ ವಿಷಯ ಸಲ್ಲಿಸಿರುತ್ತೇನೆ. ಈ ಹಿಂದೆ ಪ್ರತಿವಾದಿಯರ ವಿರುದ್ಧ ಅಸಲು ದಾವಾ ಸಂಖ್ಯೆ 55/2011 ನ್ನು ಮಾನ್ಯ ಇದೇ ನ್ಯಾಯಾಲಯದಲ್ಲಿ ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ನಾನು ನನ್ನ ಹೆಂಡತಿಯ ಮೌಕ್ತಿಯಾರ ಆಗಿ ದಾವೆ ನಡೆಸಲು ಅರ್ಜಿಯನ್ನು ಸಲ್ಲಿಸಿರುತ್ತೇನೆ ಅಂದರೆ ಸರಿಯಲ್ಲ.

2) ಅಸಲು ದಾವಾ ಸಂಖ್ಯೆ 55/2011 ರಲ್ಲಿ ಆಸ್ತಿಯ ಪ್ರತಿವಾದಿಯರ ಹಳೆಯ ಮಣ್ಣಿನ ಗೋಡೆ ಇತ್ತು ಎಂದರೆ ಸರಿ. ಸಾಮಾನ್ಯವಾಗಿ ಹಳೆಯ ಮನೆಯ ಮಣ್ಣಿನ ಗೋಡೆಗಳು 3 ಮಳ ಇರಬಹುದು ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. ಸದರಿ ದಾವೆಯಲ್ಲಿ ನಾನು ಆಸ್ತಿಯಲ್ಲಿ ಕಟ್ಟಿಗೆ ಹಾಗೂ ಮಣ್ಣು ಸಂಗ್ರಹಣೆ ಮಾಡಿರುತ್ತೇನೆ ಎಂದರೆ ಸರಿ. 2011 ರಲ್ಲಿ ಗೋಡೆಗಳು ಸರಿಯಾಗಿ ಇಲ್ಲದೇ ಇದ್ದ ಕಾರಣ ಅದನ್ನು ದುರಸ್ಥಿ ಮಾಡಲು ಅನುಮತಿ ಪಡೆದುಕೊಂಡಿರುತ್ತೇನೆ ಎಂದರೆ ಸರಿ.

3) ಸಾಕ್ಷಿಗೆ ಈಗ ಒಂದು ಛಾಯಾಚಿತ್ರವನ್ನು ತೋರಿಸಿ ಅದು ದಾವೆಯ ಆಸ್ತಿ ಇರುತ್ತದೆ ಅಂದರೆ ಸರಿಯಲ್ಲ. ವಾದ ಪತ್ರದ ಹಾತ ನಕಾಶೆಯಲ್ಲಿ ಉಲ್ಲೇಖಿಸಿದ ದಾವಾ ಆಸ್ತಿಯು ಪ್ರತಿವಾದಿಯರು ಅನುಮತಿ ಪಡೆದು ನಿರ್ಮಾಣ ಮಾಡಿದ ಆಸ್ತಿ ಅಂದರೆ ಸರಿಯಲ್ಲ. ದಿನಾಂಕ 08-02-2022 ರಂದು ಪ್ರತಿವಾದಿಯರು ಕಟ್ಟಡ ದುರಸ್ಥಿ ಪರವಾನಿಗೆಯನ್ನು ಪಡೆದು ನಾನು ಅವರಿಗೆ ತೊಂದರೆ ಮಾಡಬೇಕೆಂದು ಪ್ರಸ್ತುತ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಅಂದರೆ ಸರಿಯಲ್ಲ.

4) ನನ್ನ ಆಸ್ತಿಯ ಇ-ಸ್ವತ್ತು ಮಾಡಿಸಿಲ್ಲ. ನನ್ನ ಆಸ್ತಿಯ ವಿಸ್ತೀರ್ಣವನ್ನು ವಾದ ಪತ್ರದಲ್ಲಿ ನಮೂದು ಮಾಡಿಲ್ಲ ಅಂದರೆ ಸರಿಯಲ್ಲ. ಪ್ರತಿವಾದಿಯರು ಯಾವುದೇ ಅತೀಕ್ರಮಣ ಮಾಡಿಲ್ಲ ಅಂದರೆ ಸರಿಯಲ್ಲ. ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಿ ಅದು ಪ್ರತಿವಾದಿಯರು ಪಡೆದ ಅನುಮತಿ ಪತ್ರ ಎಂದರೆ ಸಾಕ್ಷಿಯು ಪ್ರತಿವಾದಿಯರು ನನ್ನ ಮನೆ ಅತೀಕ್ರಮಣ ಏಕೆ ಮಾಡಬೇಕೆಂದು ಪ್ರಶ್ನೆ ಮಾಡುತ್ತಾರೆ.

5) ನಾನು ಪಂಚಾಯಿತಿಗೆ ಸಲ್ಲಿಸಿದ ಅರ್ಜಿಯ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದ ಬಗ್ಗೆ ನನಗೆ ನೆನಪಿಲ್ಲ. ನಾನು 2011 ರಿಂದ ಇಲ್ಲಿಯವರೆಗೆ ಪ್ರತಿವಾದಿಯರಿಗೆ ತೊಂದರೆ ನೀಡುತ್ತಾ ಬಂದಿರುತ್ತೇನೆ ಅಂದರೆ ಸರಿಯಲ್ಲ. ನನಗೆ ಸೇರಿದ ಕಂಪೌಂಡ ಬಗ್ಗೆ ದಾಖಲೆಗಳನ್ನು ನ್ಯಾಯಾಲಯದಲ್ಲಿ ಹಾಜರು ಪಡಿಸಿಲ್ಲ. ನನ್ನ ಆಸ್ತಿಯು ಖುಲ್ಲಾ ಜಾಗವಾಗಿದ್ದು ನಾನು ಅಲ್ಲಿ ಕಂಪೌಂಡ ಇದ್ದ ಬಗ್ಗೆ ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

6) ಸಾಕ್ಷಿಗೆ ಈಗ ಒಂದು ಚಾಯಾಚಿತ್ರವನ್ನು ತೋರಿಸಿ ಅದರಲ್ಲಿ ಕಂಪೌಂಡ ಕಾಣುತ್ತಿಲ್ಲ ಎಂದರೆ ಸಾಕ್ಷಿಯು ಅದರಲ್ಲಿ ಒಂದು ಭಾಗವನ್ನು ತೋರಿಸಿ ಅದು ಕಂಪೌಂಡ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ಚಾಯಾಚಿತ್ರವನ್ನು **ನಿ.ಡಿ.1** ಎಂದು ಗುರುತಿಸಲಾಯಿತು. ನಾನು ಪ್ರತಿವಾದಿಯರ ಮನೆಯ ಹಳೆಯ ಗೋಡೆಯನ್ನು 6 ಅಡಿಯ ನನ್ನ ಕಂಪೌಂಡ ಗೋಡೆಯೆಂದು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಪ್ರತಿವಾದಿಯರು ಹಳೆಯ ಗೋಡೆಯನ್ನು ದುರಸ್ಥಿ ಮಾಡುತ್ತಿದ್ದಾರೆ ಎಂದು ನಾನು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಸಮಯವಕಾಶ ಕೋರಿದ್ದು, ಅಂತಿಮ ಸಮಯವಕಾಶ ನೀಡಲಾಯಿತು.

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)*

**ಓ. ಹೇ. ಕೇ. ಸರಿ. ಇದೆ.**

(ನವೀನ ಎಫ್. ಡಿಸೋಜಾ)
**ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ.**
**ನವಲಗುಂದ.**